ಇದನ್ನು ಜನ್ನ ತನ್ನೆರಡೂ ಕೃತಿಗಳಲ್ಲಿ ಪ್ರತಿಬಿಂಬಿಸಲು ಪ್ರಯತ್ನಿಸಿರುವುದರಿಂದ ಅವು ಕಳೆದ ಶತಮಾನಗಳಿಂದಲೂ ಓದಲ್ಪಟ್ಟಿವೆ, ಚರ್ಚಿಸಲ್ಪಡುತ್ತಲೇ ಇವೆ. ಹೆಚ್ಚು ಜನ ವಿದ್ವಾಂಸರು ಜನ್ನನ ಯಶೋಧರ ಚರಿತೆಯಲ್ಲಿ ಅಮೃತಮತಿಯ ಕಾಮ ವಿಚಾರವನ್ನು ಕುರಿತು ಚರ್ಚಿಸಿರುತ್ತಾರೆ ನಿಜ. ಆದರೆ ಆತನ ಕೃತಿ ಯಶೋಧರ ಚರಿತೆಯಲ್ಲಿ ಅಮೃತಮತಿಯು ತನ್ನ ಮೋಹದಿಂದಾಗಿ ಅರಮನೆಯ ಅಂತಃಪುರವನ್ನು ದಾಟುವುದಕ್ಕಿಂತಲೂ ಮೊದಲು ಕವಿ ನಿರೂಪಿಸುವ ಧಾರ್ಮಿಕತೆ ಮತ್ತು ಅದರ ಎದುರು ನಿಲ್ಲುವ ಪರಂಪರಾನುಗತ ಮೂಢನಂಬಿಕೆ, ಇದರ ಮುಖಾಮುಖಿಯಲ್ಲಿ ಮೌಢ್ಯವು ಮುರಿದುಬೀಳುವುದನ್ನು ಜನ್ನ ಪ್ರಬಲವಾಗಿ ಪ್ರತಿಪಾದಿಸುತ್ತಾನೆ.

★★★

ಹಿಂಸಾರಭಸಮತಿಯಾದ ಮಾರಿದತ್ತನು ಮಾರಿದೇವತೆಯ ಭಕ್ತ. ಚೈತ್ರಮಾಸದಲ್ಲಿ ಪ್ರಾಣಿಬಲಿಯಾಗಬೇಕು. ಹಾಗೆ ಬಲಿ ಕೊಡದಿದ್ದರೆ ಮಾರಿದೇವತೆ ಕೋಪಿಸಿಕೊಂಡು ಲೋಕದ ಮೇಲೆ ಪ್ರಳಯವನ್ನೇ ಸೃಷ್ಟಿ ಮಾಡುತ್ತಾಳೆ. ಜನ್ನ ಈ ಮಾರಿದತ್ತನ ಕಥೆಯನ್ನು ಚೈತ್ರಮಾಸದ ವರ್ಣನೆಯೊಡನೆ ಆರಂಭಿಸುತ್ತಾನೆ. ಎಲ್ಲ ಸುಖಗಳಿಗೂ ಆಗರವೆನಿಸಿಕೊಂಡ ವಸಂತ ಋತು ಮಾರಿದತ್ತನ ಪಾಳೆಯದಲ್ಲಿ ಕಾಣಿಸಿಕೊಂಡ ರೀತಿಯೇ ಬೇರೆ. ಆಕಾಶದಲ್ಲಿ ಮೂಡಿದ ಅರ್ಧಚಂದ್ರ ಪ್ರಾಣಿಗಳ ನೆತ್ತಿಯಲ್ಲಿ ಚುಚ್ಚಿದ ಗಾಳದಂತಿದ್ದಾನೆ. ಚಿಗುರಿದ ಅಶೋಕವೃಕ್ಷ ಉರಿಯ ಉಯ್ಯಾಲೆಯಂತಿದೆ. ಕೋಗಿಲೆಯ ಧ್ವನಿ ಪ್ರಾಣಿಗಳನ್ನು ಕೊಲ್ಲುವಾಗಿನ ಮೂದಲೆಯಂತಿದೆ. ಮುತ್ತುಗದ ಮರದ ಕೆಳಗೆ ಉದುರಿದ್ದ ಮೊಗ್ಗುಗಳನ್ನು ನೋಡಿದರೆ ವಸಂತವನ್ನು, ಶಿಶಿರವನ್ನು ಹಿಡಿದು ಮಾರಿಯ ಹರಕೆಗಾಗಿ ಮಾವಿನ ಮರದ ಅಡಿಯಲ್ಲಿ ಸಣ್ಣಗೆ ಕೊಚ್ಚಿ ಹಾಕಿರುವ ಮಾಂಸದ ತುಂಡಿನಂತೆ ಕಾಣಿಸುತ್ತದೆ. ಒಟ್ಟು ಮಾರಿಯ ಗುಡಿ ಹಸಿದ ಯಮಧರ್ಮರಾಯನ ಅಡುಗೆ ಮನೆಯಂತಿದೆ. ಇಲ್ಲಿ ಇನ್ನೆರಡು ಕಂದಪದ್ಯಗಳನ್ನು ಉದ್ಧರಿಸುವುದು ಸೂಕ್ತ:

ತಳಮನುಡಿದಿಡುವ ಕಣ್ಣಂ
ಕಳೆದೇಱಿಪ ಕರುಳ ತೋರಣಂಗಟ್ಟುವ ಕಾ
ಲ್ಗಳನುರಿಪಿ ನೆತ್ತರಾ ಕೂ
ಳ್ಗಳನಡುತಿಹ ವೀರರೆತ್ತ ನೋಳ್ಪೊಡಮದಱೊಳ್ ||

ಅಂದರೆ ಪ್ರಾಣಿಗಳ ಕಾಲನ್ನು ಕತ್ತರಿಸುತ್ತಿದ್ದಾರೆ. ಕಣ್ಣು ಕಿತ್ತು ಹೂವಿನ ಸರ ಮಾಡುತ್ತಿದ್ದಾರೆ. ಕರುಳು ಕಿತ್ತು ತೋರಣ ಕಟ್ಟುತ್ತಿದ್ದಾರೆ. ಕಾಲು ಕಿತ್ತು ಕಟ್ಟಿಗೆಯಂತೆ ಬಳಸುತ್ತಿದ್ದಾರೆ. ರಕ್ತದಲ್ಲಿ ಅನ್ನ ಬೇಯಿಸುತ್ತಿದ್ದಾರೆ.

ತಾಳುಗೆಯನುರ್ಚಿ ನೆತ್ತಿಯ
ಗಾಳಂ ಗಗನದೊಳೆಳಲ್ವ ವಾರಿಯ ಬೀರರ್
ಪಾಳಿಯೊಳೆಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ ||

ಗಂಟಲಿನಲ್ಲಿ ಚುಚ್ಚಿ ನೆತ್ತಿಯಲ್ಲಿ ಹೊರಟಿರುವ ಗಾಳವನ್ನು ತೂಗಾಡಿಸುತ್ತಾ ಸಾಲಾಗಿ ನಿಂತಿರುವ ಹರಕೆ ತೀರಿಸುವ ಭಕ್ತರು ಪಾಪದ ಬೆಳೆಗೆ ತೋಟದೊಳಗಿನ ಬೆದರುಗೊಂಬೆಗಳಂತೆ ನಿಂತಿದ್ದರು. ಆಡು, ಕುರಿ, ಕೋಣಗಳನ್ನು ಲೆಕ್ಕವಿಲ್ಲದೆ ಕೊಲ್ಲುತ್ತಿರುವಾಗ ಅವುಗಳ ರೋದನದ ಪ್ರತಿಧ್ವನಿ ಅಡವಿಯೇ ಅಳುತ್ತಿರುವಂತೆ ಕಾಣುತ್ತಿದೆ. ಈ ದೃಶ್ಯದಿಂದಾಗಿ ಭೂ ದೇವಿಯ ಎದೆಯೇ ಬಿರಿಯುತ್ತಿದೆ. ಗುಡಿಯ ಪೌಳಿಯ ಮೇಲೆ ಕೆತ್ತಿದ್ದ ನರ ಶಿರಗಳು, ಚಂಡಿಯೇ ಮಾಂಸದಾಸೆಯಿಂದ ಹೊರಗಿನ ಪ್ರಪಂಚವನ್ನೆಲ್ಲಾ ಹಲವು ಹತ್ತು ಮುಖಗಳಿಂದ ನೋಡುತ್ತಿರುವಂತೆ ಇದೆ. ಇಂಥ ಭಯಂಕರ ಸನ್ನಿವೇಶದಲ್ಲಿ ಭೈರವ,